11

# ಧರ್ಮೋಪದೇಶದ ನೆರವೇರುವಿಕೆ

# (5:17-20)

ಮೆಸ್ಸೀಯನನ್ನು ನಿರೀಕ್ಷಿಸಲಾಗಿತ್ತು ಮತ್ತು ಪೂರ್ವದಲ್ಲಿಯೇ ಎದುರುನೋಡಲಾಗಿತ್ತು ಆದರೆ ಆತನು ಏನಾಗಿದ್ದಾನೋ ಅದು ಜನರು ತಿಳಿದುಕೊಳ್ಳಲಿಲ್ಲ. ಆತನ ಧೈರ್ಯ, ಅಧಿಕಾರವುಳ್ಳ ಪಾಠಗಳನ್ನು ವಿವಾದಾತ್ಮಕವಾಗಿ ಅವಲೋಕಿಸಲಾಗಿದೆ ಅಥವಾ ದೇವರ ನಿಯಮಕ್ಕೆ ಅಗೌರವವುಳ್ಳದ್ದಾಗಿದೆ. ಸಹಜವಾಗಿ, ಸತ್ಯದಿಂದ ಯಾವುದೇ ವಿಷಯ ದೂರ ಹೋಗಲು ಸಾಧ್ಯವಿಲ್ಲ, ಈ ವಚನಗಳಲ್ಲಿ ಯೇಸು ತಾನೇ ವಿವರಿಸಿದ ಈ ಭಾಗವು (5:17-20) ಪರ್ವತದ ಮೇಲಿನ ಪ್ರಸಂಗದ ಮುಖ್ಯ ಅಂಶದಿಂದ ಪ್ರಾರಂಭವಾಗುತ್ತದೆ (5:17-7:12). ಉಳಿದ ಅಧ್ಯಾಯದ ಬೋಧನೆಗಳು ನಿರೀಕ್ಷಿಸಲಾಗಿದೆ (5:21-48), ಯೇಸು ಅಲ್ಪ ಆಳವಿಲ್ಲದ ಯೋಚನೆಯಿಂದ ಅಥವಾ ತಪ್ಪಾದ ಆಲೋಚನೆಯಿಂದ ತಿಳಿದುಕೊಂಡು ಧರ್ಮೋಪದೇಶದ ವಿವರಣೆಯನ್ನು ಸಾಮಾನ್ಯವಾಗಿ ಸ್ವೀಕರಿಸುವಂತೆ ಅಲ್ಲಿ ಸರಿಪಡಿಸಿದ್ದಾನೆ.

## ತೆಗೆದು ಹಾಕುವದಕ್ಕೆ ... ಅಲ್ಲ (5:17)

**17ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದುಹಾಕುವದಕ್ಕೆ ನಾನು ಬಂದೆನೆಂದು ನೆನಸಬೇಡಿರಿ. ತೆಗೆದುಹಾಕುವದಕ್ಕೆ ಬಂದಿಲ್ಲ; ನೆರವೇರಿಸುವದಕ್ಕೆ ಬಂದಿದ್ದೇನೆ.**

**ವಚನ 17. ನೆನಸಬೇಡಿರಿ** ಎಂಬ ಮಾತು ಅಪಾರ್ಥವನ್ನು ಸರಿಪಡಿಸಲು ಯೇಸುವಿನ ಗುರಿಯನ್ನು ಸೂಚಿಸುತ್ತದೆ (ನೋಡಿರಿ 10:34). ಅದು ಪೌಲನ ಪತ್ರಿಕೆಯಲ್ಲಿರುವ "ನಿಮಗೆ ಸಂಪೂರ್ಣ ಸಮಾಚಾರವು ತಿಳಿಯದೆ ಇರುವದು ನನಗೆ/ನಮಗೆ ಇಷ್ಟವಿಲ್ಲ" ಎಂಬ ವಾಕ್ಯಭಾಗಕ್ಕೆ ಸಮರೂಪವಾಗಿದೆ (ರೋಮಾಪುರ 11:25; 1 ಥೆಸಲೋನಿಕ 4:13). ಆತನು **ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ** ವಚನಗಳನ್ನಾಗಲಿ ತೆಗೆದು ಹಾಕಲು ಪ್ರಯತ್ನಿಸುವುದಿಲ್ಲ ಎಂದು ಯೇಸು ತನ್ನ ವಾಕ್ಯ ಕೇಳುವವರಿಗೆ ಪುನಃ ಭರವಸೆ ಕೊಡುತ್ತಿದ್ದಾನೆ. ಆಂಗ್ಲ ಭಾಷೆಯ ಸತ್ಯವೇದದಲ್ಲಿ ಈ ಶಬ್ದ "ಧರ್ಮಶಾಸ್ತ್ರ" ("Law") ಎಂದರೆ ಈ ಪದವನ್ನು ಭಾಷಾಂತರ ಮಾಡುವವರು ದೇವರು ಮೋಶೆಯ ಮುಖಾಂತರ ಇಸ್ರಾಯೇಲ್ ಜನರಿಗೆ ಕೊಟ್ಟಿರುವ ಆಜ್ಞೆಗಳು ಮತ್ತು ಧಾರ್ಮಿಕ ವಿಧಿಗಳನ್ನು ಆ ಪದವು ಸೂಚಿಸುತ್ತದೆ[1] ಎಂದು ಸಾಮಾನ್ಯವಾಗಿ ಅರ್ಥಮಾಡಿಕೊಂಡಿದ್ದಾರೆಂದು ತಿಳಿಯುತ್ತದೆ. ಮೋಶೆಯ ಧರ್ಮಶಾಸ್ತ್ರವು ಅನ್ಯದೇಶದವರಿಗೆ ಕೊಡದೆ ದೇವರು ತಾನು ಆರಿಸಿಕೊಂಡ ಜನಾಂಗಕ್ಕೆ ಕೊಟ್ಟನು. ಇದು ಅಬ್ರಾಹಾಮನ ಎಲ್ಲಾ ಸಂತತಿಯವರು ಇಸ್ಮಾಯೇಲಿನ ನಂತರ ಬಂದವರು ಇದರಲ್ಲಿ ಒಳಗೊಂಡಿಲ್ಲ.

ಯೆಹೂದ್ಯನಾಗಿ, ಇಸಾಕನ ಮುಖಾಂತರ ಅಬ್ರಾಹಾಮನ ಸಂತತಿಯವನಾಗಿ, ಯೇಸು ಕ್ರಿಸ್ತನು ಮೋಶೆಯ ಧರ್ಮಶಾಸ್ತ್ರದ ಆಧೀನದಲ್ಲಿ ಜೀವಿಸಿದನು ಮತ್ತು ಸತ್ತನು. ಈತನೊಬ್ಬನೆ ಧರ್ಮಶಾಸ್ತ್ರವನ್ನು ಸಂಪೂರ್ಣವಾಗಿ ಕೈಕೊಂಡವನು (ಇಬ್ರಿಯ 4:15; 5:8, 9). ಆತನು ಧರ್ಮಶಾಸ್ತ್ರಕ್ಕೆ ಶ್ರೇಷ್ಟ ಮರ್ಯಾದೆಯನ್ನು ಕೊಡುತ್ತಿದ್ದನು, ಆತನು ಯಾವುದೇ ರೀತಿ ಯಲ್ಲಿ ಅದನ್ನು ಅಪ್ರತಿಷ್ಠೆ ಮಾಡಿದ ಹಾಗೆ ನಾವು ಕಂಡುಕೊಳ್ಳಲಾರೆವು. ಎಲ್ಲೆಲ್ಲಿ ನಾವು ನೋಡಿದ್ದೆವೋ, ಅನೇಕ ಯೆಹೂದ್ಯ ರಬ್ಬಿಗಳು ಮತ್ತು ಪಂಡಿತರು ಧರ್ಮಶಾಸ್ತ್ರವನ್ನು

ಕೆಡಿಸಿದಾಗ ಅದನ್ನು ಕಂಡಿಸಿದನು, ಆದರೆ ಧರ್ಮಶಾಸ್ತ್ರವನಲ್ಲ. ಕೇವಲ ಧರ್ಮಶಾಸ್ತ್ರ ಕೈಕೊಂಡು ನಡೆಯುವದರಿಂದ ಇಸ್ರಾಯೇಲನ ಮಕ್ಕಳು ನೀತಿವಂತರಾಗಿ ಎಣಿಸಲ್ಪಡುವದಿಲ್ಲ; ಅವರು ತಮ್ಮ ವಿಧೇಯತೆಯ ಹೃದಯದಿಂದ ಧರ್ಮಶಾಸ್ತ್ರವನ್ನು ಗೌರವಿಸಬೇಕು (ನೋಡಿ ರೋಮಾಪುರ 2:13-16, 25-29; 3:20).

ಮಾನವನು ಬಿದ್ದು ಹೋದ ಕಾರಣದಿಂದ ಧರ್ಮಶಾಸ್ತ್ರವನ್ನು ಪ್ರತ್ಯನ್ಮಯವಾಗಿ ಕೊಡಲಿಲ್ಲ. ಇದು ಯಾವಾಗಲು ದೇವರ ವಿಮೋಚನಾ ಯೋಜನೆಯದ ಒಂದು ಭಾಗವಾಗಿದೆ. ದೈವಿಕ ಉದ್ದೇಶ ಪೂರ್ಣಗೊಳಿಸಲು ಇದು ಇಸ್ರಾಯೇಲರಿಗೆ ಕೊಡಲ್ಪಟ್ಟಿದೆ. ರೋಮಾಪುರದವರಿಗೆ, "ಧರ್ಮಶಾಸ್ತ್ರವು ಪರಿಶುದ್ಧವಾದದ್ದು, ಮತ್ತು ಆಜ್ಞೆಯು ಪರಿಶುದ್ಧವೂ ನ್ಯಾಯವೂ ಹಿತವೂ ಆಗಿರುವಂಥದ್ದು ಸರಿ." ಮತ್ತು ಇದನ್ನು "ಆತ್ಮೀಕವಾದದ್ದು" ಎಂದು ಸಹ ಕರೆಯಲಾಗುತ್ತದೆಂದು ಪೌಲನು ಹೇಳುತ್ತಾನೆ (ರೋಮಾಪುರ 7:12, 14). ಗಲಾತ್ಯದವರಿಗೆ, "ನಮ್ಮನ್ನು ಕಾಯುವ ಆಳು ಕ್ರಿಸ್ತನಲ್ಲಿಗೆ ನಡೆಸುವನು ಅದರಿಂದ ನಾವು ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಡುತ್ತೇವೆ" ಎಂದು ಆತನು ಬರೆಯುತ್ತಾನೆ (ಗಲಾತ್ಯ 3:24). ಧರ್ಮಶಾಸ್ತ್ರವು, ಆದುದರಿಂದ, ದೇವರ ಉದ್ದೇಶದ ವಿರೋಧಕ್ಕಾಗಿ ಅಲ್ಲ. ಜನರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು ಆಗುವುದಿಲ್ಲ ಎಂದು ತೋರಿಸುವದಕ್ಕೆ ಕೊಡಲ್ಪಟ್ಟಿದೆ ಮತ್ತು ಅವರನ್ನು ಕ್ರಿಸ್ತನಲ್ಲಿಗೆ ನಡೆಸಲು ಮಾರ್ಗದರ್ಶನ ನೀಡುತ್ತದೆ (ರೋಮಾಪುರ 7:7-11; 8:3, 4; ಗಲಾತ್ಯ 3:22-29).

ಹಾಗಿದ್ದರೂ, ಧರ್ಮಶಾಸ್ತ್ರವು ನಿಜವಾದ ವಿಮೋಚನೆಗೆ ಮೂಲಧಾರವೆಂದು ಯಾವಾಗಲು ಉದ್ದೇಶಿಸಿಲ್ಲ (ಗಲಾತ್ಯ 3:21). ಧರ್ಮಶಾಸ್ತ್ರವನ್ನು ಜನರು ಪರಿಪೂರ್ಣವಾಗಿ ಕೈಕೊಂಡು ನಡೆದರೆ, ಅದರಿಂದ ಅವರು ರಕ್ಷಿಸಲ್ಪಡಬಹುದು - ಆದರೆ ಅದನ್ನು ಅವರು ಮಾಡಲು ಆಗುವುದಿಲ್ಲವೆಂದು ದೇವರಿಗೆ ಮುಂಚೆಯೇ ಗೊತ್ತಿತ್ತು. ಸಮಸ್ಯೆ ಧರ್ಮಶಾಸ್ತ್ರದಲಿಲ್ಲ, ಆದರೆ ಧರ್ಮಶಾಸ್ತ್ರದ ಮುಖಾಂತರ ಆಜ್ಞಾಪಿಸಿರುವ ನೀತಿಯುಳ್ಳ ದೈವಿಕ ನಿಯಮಗಳಿಗೆ ಬದ್ಧರಾಗಿರಲು ಇಚ್ಛೆ ಇಲ್ಲದಿರುವುದು ಅಥವಾ ಮನುಷ್ಯನ ಅಸಮರ್ಥತೆ ಸಮಸ್ಯೆಯಾಗಿದೆ (ರೋಮಾಪುರ 7:14-25).

ನಾವು ನಮಗಾಗಿ ಮಾಡಲು ಆಗದೆ ಇರುವ ಕಾರ್ಯವನ್ನು ಮಾಡುವದಕ್ಕಾಗಿ ದೇವರು ಆತನ ಮಗನನ್ನು ನಮಗಾಗಿ ಕಳುಹಿಸಿಕೊಟ್ಟನು - ಧರ್ಮಶಾಸ್ತ್ರವನ್ನು ಸಂಪೂರ್ಣವಾಗಿ ಕೈಕೊಂಡು ನಡೆಯಿರಿ (ನೋಡಿರಿ 2 ಕೊರಿಂಥ 5:21). ನಮ್ಮ ಪಾಪಗಳಿಗಾಗಿ ಆತನು ಪರಿಪೂರ್ಣ ಯಜ್ಞವಾಗುವದಕ್ಕಾಗಿ ಬಂದನು (ರೋಮಾಪುರ 5:12-21; ಇಬ್ರಿಯ 10:5-10; 1 ಪೇತ್ರ 2:21-25). ಆತನು ಧರ್ಮಶಾಸ್ತ್ರಕ್ಕೆ ಸರಿಯಾಗಿ ನಡೆದುಕೊಂಡದ್ದು ಮಾತ್ರವಲ್ಲದೆ; ಆದರೆ, ಈ ಮೂಲಪಾಠದಲ್ಲಿ ಹೇಳಿದಂತೆ, ಧರ್ಮಶಾಸ್ತ್ರವು ಹೇಳಿದ ಹಾಗೆ ನಡೆದುಕೊಳ್ಳಲು ಪ್ರಯತ್ನಿಸಬೇಕೆಂದು ಆತನು ಇತರರಿಗೆ ಕಲಿಸಿದನು (19:16-22; ಲೂಕ 10:25-28).

ಈ ವಚನದಲ್ಲಿ, ಧರ್ಮಶಾಸ್ತ್ರದ ಮೇಲೆ ಆತನು ಮಾಡಿದ ಬೋಧನೆಯ ಕುರಿತು ತಪ್ಪಾಗಿ ಅರ್ಥಮಾಡಿಕೊಂಡಿರುವದನ್ನು ಸರಿಪಡಿಸಲು ಯೇಸು ಪ್ರಯತ್ನಿಸಿದರು. ಶಾಸ್ತ್ರಿಗಳು ಮತ್ತು ಫರಿಸಾಯರು ಯೆಹೂದ್ಯ ರಬ್ಬಿಯರ ಸಂಪ್ರದಾಯಗಳು ಧರ್ಮಶಾಸ್ತ್ರಕ್ಕೆ ಸಮಾನವೆಂದು ಪರಿಗಣಿಸುತ್ತಿದ್ದರು. ಆ ಸಂಪ್ರದಾಯಗಳ ವಿರುದ್ಧವಾಗಿ ಯೇಸು ಬಹಿರಂಗವಾಗಿಯೇ ಮಾತಾಡಿದನು ಮತ್ತು ನೈತಿಕ ನಿಷ್ಠೆಯಿಂದ ಅವುಗಳನ್ನು ಅನುಸರಿಸಲು ಪ್ರಯತ್ನಿಸಲಿಲ್ಲ, ಆತನನ್ನು ಯೆಹೂದ್ಯ ನಾಯಕರು ಧರ್ಮಶಾಸ್ತ್ರವನ್ನು ನಿರ್ಮೂಲಮಾಡುವವನನ್ನಾಗಿ ವರ್ಣಿಸಿದರು (ನೋಡಿರಿ 15:1-9). ನಿಜವಾಗಿಯೂ, ಅದು ಆತನ ಉದ್ದೇಶವಾಗಿರಲಿಲ್ಲ. ಅದರ ಬದಲಾಗಿ, ದೇವರ ನಿಯಮವನ್ನು ಮೊದಲಿನ ಮೂಲ ಶುದ್ಧತ್ವಕ್ಕೆ ಪುನಃ ತೆಗೆದುಕೊಂಡು ಬಂದು ಅನುಸರಿಸುವಂತೆ ಮಾಡುವುದೇ ಆತನ ಆಸೆಯಾಗಿತ್ತು (19:1-9).

**ನಾನು ಬಂದಿದ್ದೇನೆ** ಎಂಬ ಮಾತಿನ ಮುಖಾಂತರ, ಎಷ್ಟೋ ಕಾಲದಿಂದ ಎದುರು ನೋಡುತ್ತಿದ್ದ ಮೆಸ್ಸೀಯನೆಂದು ಯೇಸು ತನ್ನನ್ನು ಗುರುತಿಸಿಕೊಂಡನು. "ಒಬ್ಬನು ಬರುವವನಾಗಿದ್ದನು" ಎಂಬ ಪದವು ಮೆಸ್ಸೀಯನನ್ನು ವ್ಯಕ್ತಪಡಿಸುವಿಕೆಯಾಗಿದೆ (ನೋಡಿರಿ ಕೀರ್ತನೆ 118:26; ಮಲಾಕಿ 3:1; ಮತ್ತಾಯ 11:2, 3; 21:9; ಯೋಹಾನ 4:25). ಮೆಸ್ಸೀಯನೇ ಧರ್ಮಶಾಸ್ತ್ರಕ್ಕೆ ನಿಜವಾದ ಮತ್ತು ಅಂತಿಮವಾದ ವ್ಯಾಖ್ಯಾನಗಾರನೆಂಬ ಭಾವನೆ ಪ್ರಚಲಿತವಾಗಿತ್ತು.

ಯೆಹೂದ್ಯರು ಹಳೆ ಒಡಂಬಡಿಕೆಯನ್ನು ಸಾಮಾನ್ಯವಾಗಿ ನಾವು ಮಾಡಿದ್ದಕ್ಕಿಂತಲೂ ಭಿನ್ನವಾಗಿ ವಿಭಾಗಿಸಿದ್ದರು. ನಾವು ಅದನ್ನು ನಾಲ್ಕು ವಿಭಾಗಗಳಾಗಿ ಮಾಡಿದ್ದೇವೆ (ಧರ್ಮಶಾಸ್ತ್ರ, ಇತಿಹಾಸ, ಕವಿತೆ, ಮತ್ತು ಪ್ರವಾದನೆ), ಇಬ್ರಿಯ ಬೈಬಲ್‌ನಲ್ಲಿ ಕೇವಲ ಮೂರು ವಿಭಾಗಗಳಿವೆ (ಧರ್ಮಶಾಸ್ತ್ರದಲ್ಲಿಯೂ ಪ್ರವಾದಿಗಳ ಗ್ರಂಥದಲ್ಲಿಯೂ ಮತ್ತು ಕೀರ್ತನೆಗಳಲ್ಲಿಯೂ; ನೋಡಿರಿ ಲೂಕ 24:44). ಹಲವು ಬಾರಿ ಪೂರ್ಣ ಹಳೆ ಒಡಂಬಡಿಕೆಯನ್ನು "ಧರ್ಮಶಾಸ್ತ್ರ ಮತ್ತು ಪ್ರವಾದಿಗಳು" ಎಂದು ಹೇಳಲಾಗುತ್ತದೆ (7:12; 11:13; 22:40; ಅಪೊಸ್ತಲರ ಕೃತ್ಯಗಳು 13:15; 28:23; ರೋಮಾಪುರ 3:21).

**ನಾನು ತೆಗೆದು ಹಾಕುವದಕ್ಕೆ ಬಂದಿಲ್ಲ ನೆರವೇರಿಸುವದಕ್ಕೆ ಬಂದಿದ್ದೇನೆ.** ಯೇಸು ಧರ್ಮಶಾಸ್ತ್ರ "ತೆಗೆದು" ಹಾಕುವದಕ್ಕಾಗಿ ಅಥವಾ "ನಾಶಮಾಡಲು" ಬರಲಿಲ್ಲ, ಅದನ್ನು **"ನೆರವೇರಿಸಲು"** ಅಥವಾ "ಪರಿಪೂರ್ಣ" ಮಾಡಲು ಬಂದನು. ಗ್ರೀಕ್ ಶಬ್ದ "ತೆಗೆದು ಹಾಕು" ಅಂದರೆ "ನಾಶಮಾಡು," "ಇಲ್ಲದಂತೆ ಮಾಡು," "ರದ್ದು ಮಾಡು" ಎಂದರ್ಥವಾಗಿದೆ. "ನೆರವೇರಿಸು" ಎಂಬ ಅರ್ಥ ಕೊಡುವ ಗ್ರೀಕ್ ಶಬ್ದವು "ಸಂಪೂರ್ಣಮಾಡು," "ಮುಕ್ತಾಯಕ್ಕೆ ತನ್ನಿರಿ" ಅಥವಾ "ಅದರ ಅಂತ್ಯಕ್ಕೆ ತನ್ನಿರಿ" ಎಂದು ಅರ್ಥಕೊಡುತ್ತದೆ. ಧರ್ಮಶಾಸ್ತ್ರವನ್ನು ತೆಗೆದು ಹಾಕುವ ಬದಲು, ಯೇಸು ಅದರ ಉದ್ದೇಶವನ್ನು ಪೂರ್ಣಗೊಳಿಸಿದ್ದಾನೆ ಮತ್ತು ಆತನು ಶಿಲುಬೆ ಮೇಲೆ ಮರಣ ಹೊಂದುವ ಮುಖಾಂತರ ಅಡ್ಡವಾಗಿರುವದನ್ನು ತೆಗೆದುಹಾಕಿದನು (ರೋಮಾಪುರ 10:4; ಎಫೆಸ 2:15). ಧರ್ಮಶಾಸ್ತ್ರವು "ಸತ್ತಾಗ" ಅದರ ಒಪ್ಪಂದವು ದೀರ್ಘಕಾಲದವರೆಗೆ ಇರುವುದಿಲ್ಲ (ರೋಮಾಪುರ 7:4; ಗಲಾತ್ಯ 3:25; 5:1-4). ಯೇಸು ಪುನರುತ್ಥಾನಗೊಂಡ ನಂತರ, ಯೇಸು ತನ್ನ ಅಪೊಸ್ತಲರಿಗೆ ಧರ್ಮಶಾಸ್ತ್ರವೆಲ್ಲವನ್ನು "ನೆರವೇರಿಸಿದ್ದೇನೆ" ಎಂದು ಹೇಳಿದನು (ಲೂಕ 24:44). ಯೇಸು ಕೈಕೊಳ್ಳದೆಯಿರುವ ಧರ್ಮಶಾಸ್ತ್ರದ ಯಾವ ಭಾಗವು ಇಲ್ಲ, ಮತ್ತು ಆತನಿಗೆ ಸಂಬಂಧಿಸಿದ ಹಳೆ ಒಡಂಬಡಿಕೆಯ ಪ್ರವಾದನೆಗಳಲ್ಲಿ ನೆರವೇರಿಸದೆ ಇರುವ ಪ್ರವಾದನೆ ಯಾವುದು ಇಲ್ಲ. ಇಂದು ಯಾವನಾದರೂ ಧರ್ಮಶಾಸ್ತ್ರವನ್ನಾಗಲಿ ಅಥವಾ ಅದರ ಯಾವುದೇ ಒಂದು ಭಾಗವನ್ನಾಗಲಿ ಗಟ್ಟಿಯಾಗಿ ಹಿಡಿದುಕೊಳ್ಳಬೇಕೆಂದು ಹೇಳುವವರು ದೇವರ ಯೋಜನೆಯಲ್ಲಿ ಒಂದು ಭಾಗವಾಗಿರಲಾರದ ಕ್ರಮಪದ್ಧತಿಯನ್ನು ಅಂಟಿಕೊಂಡಿರುವವರಾಗುತ್ತಾರೆ.

## ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಹೋಗದು (5:18)

**[18]ನಿಮಗೆ ಸತ್ಯವಾಗಿ ಹೇಳುತ್ತೇನೆ - ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರು ಒಂದು ಗುಡುಸಾದರೂ ಅಳಿದು ಹೋಗಲಾರದು.**

**ವಚನ 18.** ಯೇಸು ತನ್ನ ಮುಂದಿನ ದೃಢೀಕರಿಸುವಿಕೆಯನ್ನು **ನಿಮಗೆ ಸತ್ಯವಾಗಿ ನಾನು ಹೇಳುತ್ತೇನೆ** ಎಂಬ ಮಾತುಗಳಿಂದ ಪ್ರಸ್ತಾವನೆ ಮಾಡಿದ್ದಾನೆ. "ಸತ್ಯ"ವಾಗಿ ಹೇಳುವ ಎನ್ನುವ ಶಬ್ದದ ಹಿಂದೆ ಗ್ರೀಕ್ ಆಂಗ್ಲ ಭಾಷೆಯಲ್ಲಿರುವ ಶಬ್ದ "ಆಮೇನ್" ಎನ್ನುವ ಪದವಿದೆ. ಯೇಸು ಈ ಗಂಭೀರ ಹೇಳಿಕೆಯನ್ನು ಮುಕ್ತಾಯದಲ್ಲಿ ಹೇಳದೆ ಪ್ರಾರಂಭದಲ್ಲಿ ಅಸಾಧಾರಣ ರೂಪದಲ್ಲಿ

ಬಳಸಿದ್ದಾರೆ. ಯೇಸು ದೇವರ ಚಿತ್ತವನ್ನು ಅಧಿಕಾರದೊಂದಿಗೆ ಹೇಳುವಾಗ "ನಾನು ನಿಮಗೆ ಹೇಳುತ್ತೇನೆ" ಎಂಬ ಮಾತುಗಳು ಈ ಅಧ್ಯಾಯದಲ್ಲೆಲ್ಲಾ ಪುನರಾವರ್ತನೆ ಆಗಿವೆ (5:20, 22, 26, 28, 32, 34, 39, 44).

**ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದು ಹೋಗಲಾರದು**[2] ಎಂದು ಯೇಸು ಹೇಳಿದ್ದಾನೆ. "ಒಂದು ಚಿಕ್ಕ ಅಕ್ಷರ" ಅಥವಾ ಒಂದು ಚಿಕ್ಕ "ಕಣ" (KJV) ಎನ್ನುವದು ನಿರ್ದಿಷ್ಟವಾಗಿ ಗ್ರೀಕ್‌ನಲ್ಲಿ "one iota" ಆಗಿದೆ. "Iota" ಎನ್ನುವದು ಗ್ರೀಕ್‌ನಲ್ಲಿ ಅತಿ ಚಿಕ್ಕ ಅಕ್ಷರವಾಗಿದೆ. ಇಬ್ರಿಯದಲ್ಲಿ, ಧರ್ಮಶಾಸ್ತ್ರ ಬರೆದಿರುವ ಮೂಲ ಭಾಷೆಯ ಅತಿ ಚಿಕ್ಕ ಅಕ್ಷರ "yod" ಆಗಿದೆ. "ವಿನ್ಯಾಸ" ಅಥವಾ "ಶಿರೋನಾಮೆ" (KJV) ಗ್ರೀಕ್‌ನಿಂದ ಬಂದಿರುವ ಶಬ್ದವಾಗಿದ್ದು, ವಿಶೇಷವಾಗಿ "ಕೊಂಬು" ಎಂದು ಅರ್ಥಕೊಡುತ್ತದೆ. ಇದು ಇಬ್ರಿಯ ಅಕ್ಷರದ ಮೇಲೆ ಒಂದು ಅಕ್ಷರದಿಂದ ಇನ್ನೊಂದು ಅಕ್ಷರಕ್ಕೆ ವ್ಯತ್ಯಾಸ ಸೂಚಿಸಲು ಉಪಯೋಗಿಸುವ ಚಿಕ್ಕ ಗುರುತಾಗಿದೆ. ಆಂಗ್ಲ ಭಾಷೆಯಲ್ಲಿ, "'i' ಅಕ್ಷರದ ಮೇಲಿರುವ ಬಿಂದುವನ್ನು ಮತ್ತು 't' ಅಕ್ಷರದ ಮೇಲಿರುವ ಚಿಕ್ಕ ಅಡ್ಡಗೆರೆಯನ್ನು" ತೋರಿಸುತ್ತದೆ. ಅದೇ ಸೂತ್ರವನ್ನು ವಿವರಿಸಲು ಉಪಯೋಗಿಸಬಹುದು. ವಿನಾಯಿತಿ ಇಲ್ಲದೆ, ಪ್ರತಿಯೊಂದು ಪ್ರವಾದನೆಯೂ ಸೂಚನೆಯೂ ಮತ್ತು ವಾಗ್ದಾನವೂ ನೆರವೇರಿಸಲಾಗುವುದು. ಕ್ರಿಸ್ತನಿಂದ ಶಿಲುಬೆ ಮೇಲೆ ಆ ನೆರವೇರಿಕೆ ಅಂತ್ಯಗೊಳಿಸುವವರೆಗೆ ಧರ್ಮಶಾಸ್ತ್ರ ಬಂಧಿಸುತಿತ್ತು ಮತ್ತು ಆ ಸಮಯದಲ್ಲಿ ಯೆಹೂದ್ಯರು ಅದರ ಪ್ರತಿಯೊಂದು ನಿಯಮಗಳನ್ನು ಅನುಸರಿಸಲು ಅನಿವಾರ್ಯವಾಗಿ ಕಟ್ಟುಬದ್ಧರಾಗಿರುತ್ತಿದ್ದರು.

ನಾವು ಸದ್ಯದಲ್ಲಿ ಹೊಸ ನಿಯಮವಾದ "ಕ್ರಿಸ್ತನ ನಿಯಮ"ದಲ್ಲಿ (ಗಲಾತ್ಯ 6:2) ಜೀವಿಸುತ್ತಿದ್ದೇವೆ. ನಾವು ಹಳೆಯ ನಿಯಮದಲ್ಲಿ ಜೀವಿಸುವದು ದೇವರಿಗೆ ಬೇಕಾಗಿಲ್ಲ. ಯೇಸು ಕ್ರಿಸ್ತನ ಹೊಸ ಒಡಂಬಡಿಕೆಯಲ್ಲಿ ಸಂಯೋಜಿಸಲಾಗಿರುವ ನಿಯಮಗಳನ್ನು ನಾವು ಕೈಗೊಳ್ಳಬೇಕು; ಹಳೆ ಒಡಂಬಡಿಕೆಯಲ್ಲಿ ನಿಯಮಗಳು ಪ್ರತ್ಯಕ್ಷವಾಗಿದ್ದ ಕಾರಣಕ್ಕಾಗಿ ಅಲ್ಲ, ಆದರೆ ಎಲ್ಲಾ ನಿಯಮಗಳು ಹೊಸ ಒಡಂಬಡಿಕೆಯಲ್ಲಿ ಇದದ್ದರಿಂದ ನಾವು ಅವುಗಳಿಗೆ ವಿಧೇಯರಾಗಬೇಕು. "ಈಗಲಾದರೋ ದೇವರಿಂದ ದೊರಕುವ ನೀತಿಯು ಧರ್ಮಶಾಸ್ತ್ರ ನಿಯಮಗಳಿಲ್ಲದೆ ಪ್ರಕಟವಾಗಿದೆ. ಅದು ಮೋಶೆಯ ಧರ್ಮಶಾಸ್ತ್ರದಿಂದಲೂ ಪ್ರವಾದಿಗಳ ನುಡಿಗಳಿಂದಲೂ ಸಾಕ್ಷಿಗೊಂಡಿರುತ್ತದೆ. ದೇವರಿಂದಾಗುವ ಆ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ..." ಎಂದು ಪೌಲನು ಬರೆದಿದ್ದಾನೆ (ರೋಮಾಪುರ 3:21, 22). "ನಾನು ನಿಮಗೆ ಹೇಳುತ್ತೇನೆ" (KJV) ಎಂದು 120 ಸಾರಿಗಿಂತಲೂ ಹೆಚ್ಚಾಗಿ ನಾಲ್ಕು ಸುವಾರ್ತೆಗಳಲ್ಲಿ ಯೇಸು ಹೇಳಿದ್ದಾನೆ. "ನನ್ನನ್ನು ಲಕ್ಷ್ಯಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪುಮಾಡುವಂಥದ್ದು ಒಂದು ಇದೆ, ಅದು ಯಾವುದಂದರೆ, ನಾನು ಆಡಿದ ಮಾತು; ಅದೇ ಅವನಿಗೆ ಕಡೆ ದಿನದಲ್ಲಿ ತೀರ್ಪುಮಾಡುವದು" (ಯೋಹಾನ 12:48) ಎಂದು ಆತನು ಸ್ಪಷ್ಟವಾಗಿ ಹೇಳಿದ್ದಾನೆ. "ಭೂಮ್ಯಾಕಾಶಗಳು ಅಳಿದು ಹೋಗುವವು ಆದರೆ ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ" (ಮತ್ತಾಯ 24:35) ಎಂದು ಸಹ ಆತನು ಹೇಳಿದ್ದಾನೆ.

## ಈ ಸಣ್ಣಸಣ್ಣ ಆಜ್ಞೆಗಳಲ್ಲಿಯಾದರೂ ಒಂದನ್ನು ಮೀರಿ (5:19)

**19ಆದದರಿಂದ ಈ ಸಣ್ಣಸಣ್ಣ ಆಜ್ಞೆಗಳಲ್ಲಿಯಾದರೂ ಒಂದನ್ನು ಮೀರಿ ಜನರಿಗೂ ಹಾಗೆ ಮೀರುವದಕ್ಕೆ ಬೋಧಿಸುವವನು ಪರಲೋಕರಾಜ್ಯದಲ್ಲಿ ಬಹಳ ಚಿಕ್ಕವನೆನಿಸಿಕೊಳ್ಳುವನು; ಆದರೆ ತಾನೇ ಆ ಆಜ್ಞೆಗಳಂತೆ ನಡೆದುಕೊಂಡು ಜನರಿಗೂ ಹಾಗೆ ನಡೆಯಬೇಕೆಂದು ಬೋಧಿಸುವವನು ಪರಲೋಕರಾಜ್ಯದಲ್ಲಿ ದೊಡ್ಡವನೆನಿಸಿಕೊಳ್ಳುವನು.**

**ವಚನ 19.** ಪಂಡಿತರು ಮತ್ತು ಶಾಸ್ತ್ರಿಗಳು ಧರ್ಮಶಾಸ್ತ್ರವನ್ನು ಪ್ರಧಾನ ಮತ್ತು ಅಪ್ರಧಾನ ಎಂದು ವಿಭಾಗಿಸಿದರು, ಕೆಲವು ನಿಯಮಗಳು ಇತರ ನಿಯಮಗಳಿಗಿಂತ ಪ್ರಾಮುಖ್ಯವೆಂದು ವ್ಯಾಖ್ಯಾನ ಮಾಡುತ್ತಿದ್ದರು. Jack P. Lewis ಈ ಎರಡನ್ನು ಕೆಳಗಿನ ರೀತಿಯಲ್ಲಿ ಹೋಲಿಸಿದ್ದಾರೆ:

> ಯೆಹೂದ್ಯ ರಬ್ಬಿಗಳು ಧರ್ಮಶಾಸ್ತ್ರದಲ್ಲಿ 613 ಆಜ್ಞೆಗಳನ್ನು ಲೆಕ್ಕ ಮಾಡಿದ್ದಾರೆ ಮತ್ತು ತಂದೆ ತಾಯಿಯವರನ್ನು ಗೌರವಿಸಬೇಕು ಎನ್ನುವ ಆಜ್ಞೆಯನ್ನು ಭಾರವಾದ ಆಜ್ಞೆಯಾಗಿ ಮೌಲ್ಯ ಮಾಪನ ಮಾಡಿದ್ದಾರೆ (ವಿಮೋಚನಕಾಂಡ 20:12; ಧರ್ಮೋಪದೇಶಕಾಂಡ 5:16), ಪಕ್ಷಿ ಮತ್ತು ಅದರ ಗೂಡಿನೊಂದಿಗೆ ವ್ಯವಹರಿಸುವ ಧರ್ಮೋಪದೇಶಕಾಂಡ 22:6ನ್ನು ಹಗುರವಾಗಿ ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ. ಏನೇ ಆದರೂ, ಆಜ್ಞೆಗಳಲ್ಲಿ ಯಾವುದೇ ಆಜ್ಞೆಯನ್ನು ಅಲಕ್ಷ್ಯಮಾಡುವಂತಿಲ್ಲ.[3]

Mishnah ಹೀಗೆ ಹೇಳುತ್ತದೆ,

> ಧಾರ್ಮಿಕ ವಿಧಿಯಲ್ಲಿ ದೊಡ್ಡದಕ್ಕೆ ಜಾಗೂರಕತೆ ವಹಿಸಿದಂತೆ ಚಿಕ್ಕ ಧಾರ್ಮಿಕ ವಿಧಿಯಲ್ಲಿ ಅಷ್ಟೆ ಜಾಗೂರೂಕನಾಗಿರು, ಯಾವ ಧಾರ್ಮಿಕ ವಿಧಿ ಆಚರಿಸುವದರಿಂದ ಯಾವ ಬಹುಮಾನ ಬರುತ್ತದೆಂದು ನಿನಗೆ ಗೊತ್ತಿಲ್ಲ ... ಮುಖ್ಯವಾದುದರ ಹಿಂದೆ ಹೊದಂತೆ ಚಿಕ್ಕ ವಿಧಿಯ ಹಿಂದೆಯೂ ಅದೆ ಆಸಕ್ತಿಯಿಂದ ಹೋಗು, ಮತ್ತು ಉಲ್ಲಂಘಿಸುವ ಕಾರ್ಯದಿಂದ ಓಡಿಹೋಗು. ಒಂದು ಕೆಲಸ ಮಾಡುತ್ತಿರುವಾಗ ಇನ್ನೊಂದನ್ನು ಬೆನ್ನಹತ್ತಿ ಮಾಡಲು ಇದು ನಿನನ್ನು ಆಕರ್ಷಿಸುತ್ತದೆ.[4]

**ಸಣ್ಣ ಸಣ್ಣ ಆಜ್ಞೆಗಳಲ್ಲಿಯಾದರೂ** ಎಂದು ಯೇಸು ಹೇಳುವಾಗ ಅನುಕೂಲವಾಗುವ ಭಾಷೆಯನ್ನು ಉಪಯೋಗಿಸಿದನೋ? ಶಾಸ್ತ್ರಿಗಳು ಮತ್ತು ಫರಿಸಾಯರು ಕೆಲವು ನಿಯಮಗಳು ಇತರ ನಿಯಮಗಳಿಗಿಂತಲೂ ಪ್ರಾಮುಖ್ಯವಾದವುಗಳೆಂದು ತಿಳಿದುಕೊಂಡಿದ್ದರು, ಅವರು ತಿಳಿದಂತೆ ಕೆಲವು ಆಜ್ಞೆಗಳು "ಕಡಿಮೆಯಾದ"ವುಗಳು ಕೆಲವು "ಅಲಕ್ಷ್ಯಮಾಡುವವು"ಗಳು ಎಂದು ಆತನು ಹೇಳಿದನೋ? ಬಹುಶಃ ಹೇಳಲಿಲ್ಲ. ಆಜ್ಞೆಗಳಲ್ಲಿ ಮಹಾ ಆಜ್ಞೆ ("ನಿನ್ನ ಕರ್ತನಾದ ದೇವರನ್ನು ಪ್ರೀತಿಸು"), ಅದೇ ರೀತಿಯಲ್ಲಿ ಎರಡನೆಯ ಆಜ್ಞೆ ("ನಿನ್ನಂತೆಯೆ ನಿನ್ನ ನೆರೆಯವನನ್ನು ಪ್ರೀತಿಸು") (22:34-40) ಎಂದು ಯೇಸು ಗುರುತಿಸಿದ್ದಾನೆಂಬುದನ್ನು ಜ್ಞಾಪಕಮಾಡಿಕೊಳ್ಳಬೇಕು. ಶಾಸ್ತ್ರಿಗಳು ಮತ್ತು ಫರಿಸಾಯರು ಹಗುರವಾದ ಆಜ್ಞೆಗಳ ಮೇಲೆ ಕೇಂದ್ರಿಕರಿಸಿ (ದಶಾಮಾಂಶ, ಟಂಕಶಾಲೆ, ಸಬ್ಬನಿಗ ಬೀಜ, ಮತ್ತು ಜೀರಿಗೆ ಗಿಡ), ಭಾರವಾದ ಆಜ್ಞೆಗಳನ್ನು ಅಲಕ್ಷ್ಯವಹಿಸುತ್ತಿದ್ದರು (ನ್ಯಾಯ, ಕರುಣೆ, ನಂಬಿಕೆಯನ್ನು). ಎರಡು ರೀತಿಯ ಆಜ್ಞೆಗಳಿಗೆ ಅವರು ವಿಧೇಯರಾಗಬೇಕೆಂದು ಯೇಸು ಪ್ರಕಟಿಸಿದ್ದಾನೆ (23:23).

**ಪರಲೋಕರಾಜ್ಯದಲ್ಲಿ ಬಹಳ ಚಿಕ್ಕವನೆನಿಸಿಕೊಳ್ಳುವನು** ಅಂದರೆ ಕ್ರೈಸ್ತರು ಮೋಶೆಯ ಧರ್ಮಶಾಸ್ತ್ರವನ್ನು ಕೈಗೊಳ್ಳದಿದ್ದರೆ ತಪ್ಪುಮಾಡುವವರು ಎಂದರ್ಥವಲ್ಲ. ಅದಕ್ಕಿಂತಲೂ ದೇವರಿಗೆ ವಿಧೇಯರಾಗುವದು ಮುಖ್ಯವಾದದ್ದು ಎಂದು ಒತ್ತಿ ಹೇಳುವದಕ್ಕೆ ಹೋಲಿಕೆಯನ್ನು ಉಪಯೋಗಿಸಿದ್ದಾನೆ. ಯೇಸು ಧರ್ಮಶಾಸ್ತ್ರವನ್ನು ನೆರವೇರಿಸಿರುವದರ ಬೆಳಕಿನಲ್ಲಿ ಯೇಸುವಿನ ಅಂಶವನ್ನು ಅರ್ಥಮಾಡಿಕೊಳ್ಳಬೇಕು. ವಾಕ್ಯಕ್ಕೆ ವಿಧೆಯತೆ ಎಂದರೆ ಕ್ರಿಸ್ತನ ನಿಯಮಕ್ಕೆ ವಿಧೇಯರಾಗುವದು ಎಂದರ್ಥವಾಗಿದೆ.

## ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ... (5:20)

**[20]ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕರಾಜ್ಯದಲ್ಲಿ ಸೇರಲಾರಿರಿ ಎಂದು ನಿಮಗೆ ಹೇಳುತ್ತೇನೆ.**

**ವಚನ 20.** ವಿಶಾಲವಾದ ದೃಷ್ಟಿಯಿಂದ, **ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕರಾಜ್ಯದಲ್ಲಿ ಸೇರಲಾರಿರಿ ಎಂದು ನಿಮಗೆ ಹೇಳುತ್ತೇನೆ** ಎಂದು ಯೇಸು ಹೇಳಿದ್ದಾನೆ. ಆತನ ಶಿಷ್ಯರು "ಪರಲೋಕ ರಾಜ್ಯದಲ್ಲಿ ಪ್ರವೇಶಿಸುವದಕ್ಕೆ ಯಾಂತ್ರಿಕವಾಗಿ ಕ್ರಿಸ್ತನ ನಿಯಮಕ್ಕೆ ವಿಧೇಯರಾಗುವದಕ್ಕಿಂತ ಹೆಚ್ಚಾಗಿ ಮುನ್ನಡೆಯಬೇಕೆಂದು" ಯೇಸು ಒತ್ತಿ ಹೇಳಿರುವದರಲ್ಲಿ ಯಾವುದೇ ಸಂಶಯವಿಲ್ಲ.[5] "ಶಾಸ್ತ್ರಿಗಳ ಮತ್ತು ಫರಿಸಾಯರ" ನೀತಿ, ಮತಧರ್ಮಕ್ಕೆ ಸಂಬಂಧಪಟ್ಟಿರುವ ಆಚಾರಪದ್ಧತಿಗಳು ಬಲವಾಗಿ ಕೈಕೊಳ್ಳುವ ಕಾಲದವರೆಗೆ ದೈವ ಭಕ್ತಿ ಶೂನ್ಯವಾದ ಅನುಭವಗಳನ್ನು ತಮ್ಮ ಹೃದಯದಲ್ಲಿ ಆಶ್ರಯಿಸಲು ಅನುಮತಿಕೊಡುವೆವು. ಇದು ದೇವರ ನಿಯಮದ ಅರ್ಥರಹಿತವಾದ ಅನೀತಿ ಯಾಗಿದೆ. ಅಸಂಖ್ಯಾವಾದ ಬಾಹ್ಯಚಾರಗಳನ್ನು ಅನುಸರಿಸುವದರಿಂದ, ಹೃದಯಗಳ ಆಲೋಚನೆಯೊಂದಿಗೆ ಚಿಂತಿಸುವ ಅಗತ್ಯವಿಲ್ಲವೆಂದು ಅಂತಿಮ ಅಭಿಪ್ರಾಯಕ್ಕೆ ಯೇಸುವಿನ ಶಿಷ್ಯರು ಬರಬಾರದು. ಮೊದಲು ಪಂಚಪಾತ್ರೆ ಅಥವಾ ಬಟ್ಟಲುಗಳ ಒಳಭಾಗವನ್ನು ಶುಚಿಮಾಡದೇ ಹೊರ ಭಾಗವನ್ನು ಶುಚಿ ಮಾಡುವದರಿಂದ ಏನು ಪ್ರಯೋಜನವಿಲ್ಲವೆಂದು ನಂತರ ಯೇಸು ಶಾಸ್ತ್ರಿಗಳಿಗೆ ಮತ್ತು ಫರಿಸಾಯರಿಗೆ ಹೇಳಿದನು (23:26).

### ಪಾಠಗಳು

## ಯೇಸು ಮತ್ತು ಧರ್ಮಶಾಸ್ತ್ರ (5:17-20)

ಯೇಸು ಮೋಶೆಯ ಧರ್ಮಶಾಸ್ತ್ರವನ್ನು "ನಾಶಮಾಡಲು" ಬರಲಿಲ್ಲ ಆದರೆ ಅದನ್ನು "ನೆರವೇರಿಸಲು" ಬಂದನು. ಯೆಹೂದ್ಯರ ವಿಧವಿಧವಾದ ವಿವರಣೆ, ಅದರಲ್ಲಿ ಸೇರಿಸಿ ಹೇಳುವದು, ಮತ್ತು ಕೆಲವು ಅದರಿಂದ ತೆಗೆದುಹಾಕುವದು, ಕೆಲವು ಬಿಟ್ಟು ಬಿಡುವದು, ಇವೆಲ್ಲವುಗಳನ್ನು ಸರಿಪಡಿಸಿ ಪುನಃಸ್ಥಾಪನೆಮಾಡಿ ಅದರ ಘನತೆ ಸ್ಥಾಪಿಸಲು ಆತನು ಬಂದನು. ಆತನು ಹೊಸ ಯುಗದ ಒಡಂಬಡಿಕೆಯನ್ನು ಸ್ಥಾಪಿಸುತ್ತಿದ್ದಾನೆ - ಅದು ಕ್ರೈಸ್ತರ ಯುಗವೆಂದು ಆತನ ಹೇಳಿಕೆಗಳಿಂದ ತಿಳಿದು ಬರುತ್ತದೆ. ದೇವರು ಹಿಂದೆ ಎರಡು ಯುಗಗಳಲ್ಲಿ ಕೊಟ್ಟಿರುವ ನಿತ್ಯ ನಿಯಮಗಳನ್ನು ಯೇಸು ಹೊಸ ಒಡಂಬಡಿಕೆಯಲ್ಲಿ ಒಟ್ಟುಗೂಡಿಸಿದ್ದಾನೆ. ಅವೆಲ್ಲವುಗಳು ಹಳೆ ಒಡಂಬಡಿಕೆಯ ಭಾಗಗಳಾಗಿವೆ ಎಂಬುದಕ್ಕಲ್ಲದೆ, ಯೇಸು ಅವೆಲ್ಲವುಗಳನ್ನು ನಮಗೆ ಕೊಟ್ಟಿರುವದರಿಂದ ನಾವು ಅವೆಲ್ಲವುಗಳನ್ನು ಕೈಕೊಳ್ಳಬೇಕು (ನೋಡಿರಿ ಇಬ್ರಿಯ 8:7-13).

---

ಟಿಪ್ಪಣಿಗಳು

[1]ಹಾಗಿದ್ದರೂ, ಒಂದು ನಿರ್ಧಾರ ಮಾಡುವಾಗ ಸನ್ನಿವೇಶವು ಯಾವಾಗಲು ಅದರೊಂದಿಗೆ ಆಲೋಚಿಸಬೇಕು. [2]ನೋಡಿರಿ **ಲೂಕ 16:17** ಯೆಹೂದ್ಯ ಗುರುಗಳು ಬರೆಯುವಾಗ ಇಂಥಹ ಸಮಾನಾಂತರ ಭಾಷೆಯನ್ನು ಉಪಯೋಗಿದ್ದಾರೆ. *Exodus Rabbah* 6.1 ಹೀಗೆ ಹೇಳುತ್ತದೆ, "ಧರ್ಮಶಾಸ್ತ್ರದಿಂದ ಎಂದಿಗೂ ಒಂದು ಅಕ್ಷರವಾದರೂ ತೆಗೆದುಹಾಕಲ್ಪಡುವದಿಲ್ಲ." [3]Jack P. Lewis,

*The Gospel According to Matthew*, Part 1, The Living Word Commentary (Austin, Tex.: Sweet Publishing Co., 1976), 87. [4]Mishnah *Aboth* 2.1; 4.2. [5]Lewis, 88.